# ಸಂಭೂತಿ–ಅಸಂಭೂತಿ

ದೈವದ ಉಪಾಸನೆಯಲ್ಲಿ ಎರಡು ಬಗೆ ಉಂಟು. ಮೊದಲನೆಯದು ಸಂಭೂತಿ; ಎರಡನೆಯದು ಅಸಂಭೂತಿ. ಸಂಭೂತಿ ವ್ಯಕ್ತವಾದದ್ದು; ಅಸಂಭೂತಿ ಅವ್ಯಕ್ತವಾದದ್ದು. ಮೊದಲನೆಯದು ಸಗುಣ, ಎರಡನೆಯದು ನಿರ್ಗುಣ. ಇದು ದೇವರನ್ನು ಕುರಿತು ಉಪಾಸನೆ ಮಾಡುವ ವಿಷಯದಲ್ಲಿ ತತ್ತ್ವಜ್ಞರು ಹೇಳಿದ್ದಾರೆ. ಇವೆರಡು ಉಪಾಸನೆಗಳು ಹಿಂದಿನಿಂದಲೂ ರೂಢಿಯಲ್ಲಿ ಇದ್ದುವು. ಇವೆರಡು ಉಪಾಸನೆಗಳು ಒಂದು ಮತ್ತೊಂದಕ್ಕೆ ಪೂರಕವೇ ಹೊರತು; ಮಾರಕವಲ್ಲ. ಒಂದನ್ನು ಬಿಟ್ಟು, ಮತ್ತೊಂದನ್ನು ತೆಗೆದುಕೊಂಡರೆ ಪೂರ್ಣಸತ್ಯದ ಅರಿವು ನಮಗೆ ಆಗುವುದಿಲ್ಲ. ಇವೆರಡೂ ಬೇರೆ ಬೇರೆ ಅಲ್ಲ ಎಂಬುದನ್ನು ನಾವು ದೃಢಪಡಿಸಿಕೊಳ್ಳಬೇಕು. ಒಂದನ್ನು ಬಿಟ್ಟು ಮತ್ತೊಂದನ್ನು ತೆಗೆದುಕೊಂಡರೆ, ಸಂಪೂರ್ಣ ಅರಿವು ನಮಗೆ ಉಂಟಾಗುವುದಿಲ್ಲ. ಸಗುಣನಿರ್ಗುಣ ಇವೆರಡೂ ಬೇರೆಬೇರೆ ಅಲ್ಲ. ಅವು ಒಂದೇ ನಾಣ್ಯದ ಎರಡು ಮುಖಗಳೆಂಬುದನ್ನು ನಾವು ನಿಶ್ಚಯ ಮಾಡಿಕೊಳ್ಳಬೇಕು!

ಪ್ರಾಚೀನ ಉಪನಿಷತ್ತುಗಳಲ್ಲಿ ಒಂದಾದ 'ಈಶೋಪನಿಷತ್ತಿ'ನಲ್ಲಿ ಸಂಭೂತಿ ಮತ್ತು ಅಸಂಭೂತಿ ಎಂಬ ಪರಿಕಲ್ಪನೆಗಳು ಬಳಕೆಯಾಗಿವೆ. ಅಲ್ಲಿಯ ಮಾತಿನ ತಾತ್ಪರ್ಯ ಇಷ್ಟು: 'ಯಾರು ಅಸಂಭೂತಿ ಎಂದರೆ ನಿರ್ಗುಣ ಉಪಾಸನೆಯನ್ನು ಮಾಡುವರೋ ಅವರು ಕುರುಡುಗತ್ತಲೆಯನ್ನು ಸೇರುತ್ತಾರೆ. ಯಾರು ಸಂಭೂತಿಯಲ್ಲಿಯೇ ನಿರತರಾಗಿರುತ್ತಾರೋ ಅವರು ಅದಕ್ಕಿಂತ ಹೆಚ್ಚಿನ ಕತ್ತಲೆಯನ್ನು ಸೇರುತ್ತಾರೆ' ಎಂದಿದೆ. ಇಲ್ಲಿ 'ಕುರುಡುಗತ್ತಲೆ' ಎಂದಿದೆಯಷ್ಟೆ. ಇದಕ್ಕೆ ಸಂಪೂರ್ಣ ಅಜ್ಞಾನವೆಂದು ಅರ್ಥವಲ್ಲ. ದಾರಿ ತಪ್ಪುವರೆಂದು ನಾವು ತಿಳಿಯಬೇಕು. ಯಾರು ನಿರ್ಗುಣೋಪಾಸನೆಯ ಕಡೆಗೆ ಹೋಗುವರೋ ಅವರು ಚೆನ್ನಾಗಿ ಹದಗೊಂಡಿರಬೇಕು. ಆಗ ಮಾತ್ರ ಆ ದಾರಿಯಲ್ಲಿ ಹೋಗಲು ಸಾಧ್ಯ. ಎವರೆಸ್ಟ್ ಶಿಖರ ಹತ್ತಬೇಕಾದರೆ ಶರೀರದಾರ್ಢ್ಯ ಚೆನ್ನಾಗಿರಬೇಕಷ್ಟೆ. ಹೃದಯ ಮತ್ತು ಶ್ವಾಸಕೋಶಗಳು ಬಲವಾಗಿರಬೇಕಷ್ಟೆ. ಅಸಂಭೂತಿಯ ಉಪಾಸನೆಗೆ ಇಂಥದೇ ಯೋಗ್ಯತೆಯನ್ನು ಉಪಾಸಕನು ಮೊದಲು ಸಂಪಾದಿಸಿಕೊಳ್ಳಬೇಕು. ಒಮ್ಮೆ ಶ್ರೀರಾಮಕೃಷ್ಣಪರಮಹಂಸರು "ಶಬ್ದವೇದಿ' ವಿದ್ಯೆಯ ಅಭ್ಯಾಸ ಮಾಡಬೇಕಾದರೆ ಒಂದೇ ಕಡೆ ಸ್ಥಿರವಾಗಿರುವ ವಸ್ತುವನ್ನು ಹೊಡೆಯುವ ಅಭ್ಯಾಸ ಮಾಡಬೇಕು. ಅನಂತರ ಚಲಿಸುವ ವಸ್ತು, ಆಮೇಲೆ ಹಾರುವ ವಸ್ತು, ಅನಂತರ ಶಬ್ದವೇದಿ. ಇದು ವ್ಯಕ್ತದಿಂದ ಅವ್ಯಕ್ತದ ಕಡೆಗೆ ಹೋಗುವ ಮಾರ್ಗ'– ಎಂದು ಹೇಳಿದ ಮಾತನ್ನು ಉಪಾಸನೆಯ ಎರಡು ಕ್ರಮಕ್ಕೂ ನಾವು ಅನ್ವಯಿಸಿಕೊಳ್ಳಬಹುದಾಗಿದೆ. ಅರ್ಜುನ ಶ್ರೀಕೃಷ್ಣನನ್ನು ಅವ್ಯಕ್ತವನ್ನು ಉಪಾಸನೆ ಮಾಡುವವರೂ ವ್ಯಕ್ತವನ್ನು ಉಪಾಸನೆ ಮಾಡುವವರೂ ಇವರಲ್ಲಿ ಯಾರು ಮೇಲು ಎಂದು ಕೇಳುತ್ತಾನೆ. ಆಗ ಶ್ರೀಕೃಷ್ಣ ಅವ್ಯಕ್ತ ಉಪಾಸನೆ ತುಂಬಾ ಕ್ಲೇಶ. ಏಕೆಂದರೆ ದೇಹಧಾರಿಗಳಿಗೆ ಅವ್ಯಕ್ತದ ಗತಿ ದುರ್ಲಭ ಎಂದು ಅವನು ಸೂಚನೆ ನೀಡುತ್ತಾನೆ. ದೇಹಾಭಿಮಾನ ಮೀರಿದರೆ ಮಾತ್ರ ಅಸಂಭೂತಿಯ ಉಪಾಸನೆ ಮಾಡಲು ಸಾಧ್ಯವೆಂಬುದು ಅವನ ಇಂಗಿತ. ಸರ್ವಜ್ಞನು 'ಅದ್ವೈತಕ್ಕೆ ಹೋರಾಡಿ, ಇದ್ದುದನು ನೀಗಾಡಿ, ಉದ್ದನಾ ಮರವೇರಿ, ತಲೆಕೆಳಗಾಗಿ ಬಿದ್ದಂತೆ' ಎಂದು ಹೇಳಿದ್ದಾನೆ. ಅದ್ವೈತದ ಅನುಸಂಧಾನ ಮಾಡುವಾಗ, ಹಿಂದೆ ಉಪಾಸನೆ ಮಾಡುತ್ತಿದ್ದ ವಿಗ್ರಹ ಪೂಜೆ, ಸ್ತೋತ್ರ ಮುಂತಾದವುಗಳನ್ನು ಬಿಡುತ್ತಾನೆ. ಆದರೆ, ಅಸಂಭೂತಿಯನ್ನು ಮನಸ್ಸಿನಲ್ಲಿ ಚಿಂತಿಸುವುದಕ್ಕೂ ಆಗುವುದಿಲ್ಲ. ಅದೇ ತಲೆಕೆಳಗಾಗಿ ಬಿದ್ದಂತೆ. ಇದ್ದುದನ್ನು ಕಳೆದುಕೊಂಡಾ ಮುಂದಿನದು ಸಿಕ್ಕಲಿಲ್ಲ ಎಂಬಂತಾಗುತ್ತದೆ. ಹೀಗಾಗಿ, ಸಂಭೂತಿ ಪ್ರಜ್ಞೆಯಿಂದ ಅಸಂಭೂತಿಯ ಕಡೆಗೆ ನಾವು ಹೋಗಬೇಕು.

ಸ್ವಾಮಿ ವಿವೇಕಾನಂದರು, ಒಮ್ಮೆ ದೇವರ ಬಗೆಗೆ ಮಾತನಾಡುವಾಗ ದೈವವನ್ನು ಮನುಷ್ಯರೂಪಿಯೆಂದೇ ಭಾವಿಸಬೇಕು. ಮನುಷ್ಯ ದೇವರನ್ನು ಚಿಂತಿಸಬೇಕಾದರೆ, ಮನುಷ್ಯನ ಮೂಲಕ ಮಾತ್ರ ಸಾಧ್ಯ ಎಂದು ಅವರು ಹೇಳಿದ್ದುಂಟು. ಆಕಾರದಿಂದ ನಿರಾಕಾರದ ಕಡೆಗೆ ನಾವು ಪ್ರಯಾಣ ಮಾಡಬೇಕು. ಇದು ವಿಕಾಸದ ದಾರಿ. ಯಾರೇ ಆದರೂ ಕೆಳಗಿನ ಮೆಟ್ಟಿಲು ದಾಟಿಕೊಂಡೇ ಮೇಲಿನ ಮೆಟ್ಟಿಲನ್ನು ಮುಟ್ಟಬೇಕು. ದೇವರನ್ನು ಸಗುಣವಾಗಿ ಉಪಾಸನೆ ಮಾಡುವವರಲ್ಲಿ ಒಂದೇ ಮಟ್ಟದವರು ಇರುವುದಿಲ್ಲ. ಮೇಲಿನ ಮಟ್ಟದ ಉಪಾಸಕರಿಗೆ ಎಲ್ಲಾ ದೇವ–ದೇವಿಯರು ಒಂದೇ ಎಂದು ಭಾವಿಸಿಬಿಡುತ್ತಾರೆ. ದೈವವನ್ನು ಯಾವ ಹೆಸರಿನಿಂದ ಕರೆದರೂ ಅವರಿಗೆ ಚಿಂತೆಯಿಲ್ಲ. ಯಾವ ಧರ್ಮದ ದಾರಿಯಲ್ಲಿ ನಡೆದರೂ ಎಲ್ಲವೂ ಒಂದೇ ಗುರಿಯೆಂದು ಅವರು ತಿಳಿದುಕೊಳ್ಳುತ್ತಾರೆ. ಆದರೆ, ಕೆಳಗಿನ ಮಟ್ಟದವರಲ್ಲಿ ಈ ಔದಾರ್ಯವನ್ನು ನಾವು ಕಾಣುವುದಿಲ್ಲ. ಅಲ್ಲಿರುವುದು ಶುದ್ಧಾಂಗವಾಗಿ ಮತಭ್ರಾಂತಿ. ತಮ್ಮ ತಮ್ಮ ದೇವರೇ ಶ್ರೇಷ್ಠವೆಂದೂ ತಮ್ಮ ಧರ್ಮವೇ ಒಳ್ಳೆಯದೆಂದೂ ಅಂಥವರು ಭಾವಿಸುತ್ತಾರೆ. ಇವರು ಒಳಗಡೆ ಇರುವ ತಿರುಳನ್ನು ಬಿಟ್ಟು ಮೇಲಿರುವ ಕರಟಕ್ಕಾಗಿ ಕಚ್ಚಾಡುತ್ತಾರೆ. ಇಂಥವರ ಸಗುಣದ ನೆಲೆಗೆ, ನಿರ್ಗುಣದ ಹಿನ್ನೆಲೆ ಇಲ್ಲದಿರುವುದೇ ಪ್ರಮುಖ ಕಾರಣ. ಅಲ್ಲಿ ಸಗುಣದ ಹಲವು ವ್ಯಕ್ತಿಗಳು ಇರುತ್ತಾರೆ. ಇಂಥವರಿಂದಲೇ ಲೋಕಹಾನಿ. ಧರ್ಮಯುದ್ಧಗಳಿಗೆಲ್ಲಾ ಇದೇ ಮೂಲಕಾರಣ. ಶಿವನನ್ನು ಪೂಜಿಸುವವರು ಕೃಷ್ಣನನ್ನು ಜರೆಯುತ್ತಾರೆ. ಕೃಷ್ಣನನ್ನು ಪೂಜಿಸುವವರು ಇನ್ನಾವುದೋ ದೇವಿಯನ್ನು ತೆಗಳುತ್ತಾರೆ!

ಒಂದು ಆಕಾರದಿಂದ ಆಧ್ಯಾತ್ಮಿಕ ಸಾಧನೆ ಮೊದಲು ಪ್ರಾರಂಭ ಆಗಬೇಕು. ಇಲ್ಲಿ ಸಗುಣದ ಊರುಗೋಲು ಇರಬೇಕು. ಆದರೆ, ತನ್ನ ಸಗುಣದ ಊರುಗೋಲೊಂದೇ ಸರ್ವಶ್ರೇಷ್ಠ ಎಂಬ ಭ್ರಾಂತಿಯನ್ನು ಬಿಡಬೇಕು. ಶ್ರೀರಾಮಕೃಷ್ಣಪರಮಹಂಸರು ಕಾಳಿಕಾದೇವಿಯನ್ನು ಪೂಜಿಸುತ್ತಿದ್ದರು. ಅದೇ ರೀತಿ ಅದ್ವಯ ಭಾವದಲ್ಲೂ ಇರುತ್ತಿದ್ದರು. ಅವರು ಸಗುಣದಿಂದ ನಿರ್ಗುಣದ ಕಡೆಗೆ ನಡೆದವರು. ಭಕ್ತಿ ಸಂಗೀತದಲ್ಲಿ 'ನಿರ್ಗುಣ ಭಜನ್'ಗೆ ಮಹತ್ತರವಾದ ಸ್ಥಾನವುಂಟಷ್ಟೆ. ಸಾಧುವರ್ಯರು ನಿರ್ಗುಣದ ಉಪಾಸಕರು ಆಗಿರುತ್ತಿದ್ದರು. ಇದು ಸಂಭೂತಿ ಪ್ರಜ್ಞೆಯಿಂದ ಅಸಂಭೂತಿಯ ಕಡೆಗೆ ಹೋಗುವ ಮಾರ್ಗ. ಆಧ್ಯಾತ್ಮಿಕ ಸಾಧಕರಿಗೆ ದ್ವೈತವೂ ಬೇಕು; ಅದ್ವೈತವೂ ಬೇಕು. ಆಕಾರದ ನೆಲೆಯಿಲ್ಲದೆ ನಿರಾಕಾರದ ನೆಲೆ ತಿಳಿಯಲಾರದು. ಸಗುಣತ್ವದ ಮೂಲಕ ನಿರ್ಗುತ್ವದತ್ತ ಸಾಗುವುದು ಪಾರಮಾರ್ಥಿಕ ಸಾಧನೆಯ ಮೂಲಕ ಮಾತ್ರ ಸಾಧ್ಯ.

■ **ಪುರಂಜೀವಿ**

## ಮಾತೇ ಮುತ್ತು

- ನಮ್ಮಿಂದ ಕಣ್ಮರೆಯಾದ ಮಹಾನುಭಾವರು ಉಸುರಿದ ಮಾತುಗಳೇ ಸದ್ಗ್ರಂಥಗಳು.
  —ಕ್ಯಾನಿಂಗ್
- ಅಧಿಕಾರ ಪ್ರಯೋಗಕ್ಕೆ ವಿಚಾರಣೆಯ ಭಯವೇ ಮೈಗಾವಲು.
  —ಡಿವಿಜಿ
- ಅನುಭವವೆಂಬುದು ಅನುಭವಿಸಬೇಕಲ್ಲದೆ ಹೊತ್ತಗೆಯಲ್ಲಿಲ್ಲ.
  —ಸಿದ್ದರಾಮ
- 'ಅಹಂ ಅಸ್ಮಿ' ನಾನಿದ್ದೇನೆ, ನಾನು ಬದುಕಿದ್ದೇನೆ ಎಂದು ಸಿಂಹ ಗರ್ಜನೆ ಮಾಡುವವನು ದೀರ್ಘಕಾಲ ಬದುಕುವುದು ಖಂಡಿತ.
  —ಕೆ.ಪಿ. ಪುಟ್ಟಣ್ಣಶೆಟ್ಟಿ
- ಜಗತ್ತೇ ಒಂದು ರಂಗಭೂಮಿಯೆಂದು ಷೇಕ್ಸ್‌ಪಿಯರ್ ಹೇಳಿದ್ದಾನೆ. ಆದರೆ ಅದು ಸುಳ್ಳು! ಸುಸ್ತಾದಾಗ ಸುಧಾರಿಸಿಕೊಳ್ಳುವುದಕ್ಕೆ ಸಮಾಜದಲ್ಲಿ ಸೈಡ್‌ವಿಂಗ್ ಎಲ್ಲಿ?
  —ಟಿ.ಪಿ. ಕೈಲಾಸಂ
- ಮನೆಯ ಹೊರಗೆ ಮಾತಾಡುವ ಪ್ರಸಂಗ ಬಂದಾಗೆಲ್ಲ ಗಂಡಸು, ಮನೆಯೊಳಗೆ ಮಾತಾಡುವ ಪ್ರಸಂಗ ಬಂದಾಗೆಲ್ಲಾ ಹೆಂಗಸು ಮಾತಾಡಬೇಕು.
  —ಆರ್ಲ್‌ವಾರೆನ್
- ಹೆಣ್ಣು ಮದುವೆಗಾಗಿ ಗಂಡನ್ನು ಸ್ವೀಕರಿಸುತ್ತಾಳೆ, ಗಂಡು ಹೆಣ್ಣಿಗಾಗಿ ಮದುವೆಯನ್ನು ಒಪ್ಪಿಕೊಳ್ಳುತ್ತಾನೆ.
  —ಜಾರ್ಜ್ ಮೇಸನ್